**ಓ.ಎಸ್. ನಂಃ 129/2017**
**<u>ಪಿ.ಡಬ್ಲ್ಯೂಃ 1</u>**

ದಿನಾಂಕಃ 24-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಡಿ.ಎಂ ವಕೀಲರಿಂದಃ</u>

ನೀವು ಈ ದಾವೆಯನ್ನು ಯಾರ ವಿರುದ್ಧ ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ಬುಜ್ಜಮ್ಮ, ಉಷಾಂತಮ್ಮ ಹಾಗೂ ಮಾಯಮ್ಮ ರವರ ವಿರುದ್ಧ ದಾಖಲಿಸಿದ್ದೇನೆಂದು ನುಡಿಯುತ್ತಾರೆ. ಮೂಲ ವಾದ ಪತ್ರದಲ್ಲಿ ಸದರಿ ಪ್ರತಿವಾದಿಯರ ಹೆಸರುಗಳು ಇಲ್ಲ ಎಂದರೆ ಸಾಕ್ಷಿ ಮೂಲ ದಾವೆಯನ್ನು ನನ್ನ ಅತ್ತೆಯ ವಿರುದ್ಧ ದಾಖಲಿಸಿದ್ದೆನು ಎಂದು ನುಡಿಯುತ್ತಾರೆ.

2. ನನ್ನ ಮಾವನ ಹೆಸರು ತಿಪ್ಪಣ್ಣ ಎಂದು ಇತ್ತು. ದಾವಾ ಆಸ್ತಿಯ ಸರ್ವೆ ನಂ.261 ಇರುತ್ತದೆ. ದಾವಾ ಜಮೀನು 03 ಎಕರೆ 08 ಗುಂಟೆ ಇದೆ. ಸದರಿ ಆಸ್ತಿ ನನ್ನ ಅತ್ತೆ-ಮಾವನ ಆಸ್ತಿ ಆಗಿರುತ್ತದೆ. ವಾದ ಪತ್ರದ 5 ನೇ ಪುಟದಲ್ಲಿ ಕೇವಲ ಚೆಕ್ ಬಂದಿ ನಮೂದಿಸಲಾಗಿದೆ ಹೊರತು ದಾವಾ ಜಮೀನಿನ ಸರ್ವೆ ನಂಬರು ಹಾಗೂ ವಿಸ್ತೀರ್ಣ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವೆ ಕಾನೂನಿನ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

3. ನಿಮ್ಮ ಕುಟುಂಬಕ್ಕೆ ಮನೆಗಳು ಇದ್ದಾವೆಯೇ ಎಂದರೆ ಸಾಕ್ಷಿ ಇದ್ದಾವೆ ಎಂದು ನುಡಿಯುತ್ತಾರೆ. ಸದರಿ ಮನೆಗಳನ್ನು ಸಹ ಈ ದಾವೆಯಲ್ಲಿ ಸೇರಿಸಿದ್ದೇನೆ. ಮನೆಗಳನ್ನು ದಾವೆಯಲ್ಲಿ ಸೇರಿಸದೇ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಕಳೆದ 7-8 ವರ್ಷಗಳಿಂದ ನನ್ನ ತವರು ಮನೆಯಲ್ಲಿ ವಾಸವಾಗಿದ್ದೇನೆ. 1 ನೇ ವಾದಿಯಾದ ನನ್ನ ಮಗನು ಸಹ ನನ್ನೊಂದಿಗೆ ವಾಸವಾಗಿದ್ದಾನೆ. ನನ್ನ ಗಂಡ ಹಾಗೂ ಅತ್ತೆ-ಮಾವ ಹುಷಾರಿಲ್ಲದೆ ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿಯವರ ಆಸ್ಪತ್ರೆ ಖರ್ಚಿಗೆ ಪ್ರತಿವಾದಿ ನಂ.1(ಎ) ರವರು ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1(ಎ) ರವರು ತಮಗೆ ಬೇಕಾದವರ ಕಡೆಯಿಂದ ರೂ.4-5 ಲಕ್ಷ ಹಣ ಪಡೆದು ನನ್ನ ಗಂಡ, ಅತ್ತೆ ಮತ್ತು ಮಾವನ

ಆಸ್ಪತ್ರೆ ಚಿಕಿತ್ಸೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ತವರು ಮನೆಗೆ ಹೋಗುವಾಗ ನನ್ನ ಅತ್ತೆ-ಮಾವನ 9-10 ತೊಲೆ ಬಂಗಾರವನ್ನು ಸಹ ತೆಗೆದುಕೊಂಡು ಹೋಗಿದ್ದೇನೆಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ಹೆಚ್ಚು ಕಾಲ ತವರು ಮನೆಯಲ್ಲಿಯೇ ಇರುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಜೊತೆ ಇರದ ಕಾರಣ ನನ್ನ ಗಂಡ ಮರಣಹೊಂದಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ನನ್ನ ಗಂಡನೊಂದಿಗೆ ವಾಸವಾಗಿದ್ದೆನು ಎಂದು ನುಡಿಯುತ್ತಾರೆ.

4. ಪಾಲು ನೀಡುವಂತೆ ನಾನು ನನ್ನ ಅತ್ತೆ ಹಾಗೂ ಇತರರನ್ನು ಕೇಳಿದ್ದೆನು. 1 ನೇ ವಾದಿ ಜನಿಸಿದ 09 ತಿಂಗಳ ನಂತರ ಪಾಲು ನೀಡುವಂತೆ ಕೇಳಿದ್ದೆನು. ನಾನು ಆ ರೀತಿ ಪಾಲು ನೀಡುವಂತೆ ಕೇಳಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಈಗ ಪ್ರತಿವಾದಿ ನಂ.1(ಎ ರಿಂದ ಸಿ) ರವರು ಸಾಗುವಳಿ ಮಾಡುತ್ತಿದ್ದಾರೆ. ನಾವು ಯಾವತ್ತು ದಾವಾ ಜಮೀನಿನ ಜಂಟಿ ಸ್ವಾಧೀನದಲ್ಲಿ ಇಲ್ಲ, ಆದ್ದರಿಂದ ನಮಗೆ ಪಾಲು ವಿಭಾಗ ಕೇಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಈ ವಿಷಯ ಗೊತ್ತಿದ್ದರೂ ನಾನು ಸುಳ್ಳು ದಾವೆ ಹಾಗೂ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(2 ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದು ಪ್ರತಿವಾದ ಪತ್ರ ಸಹ ಸಲ್ಲಿಸದಿರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ)

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ